ಸೃಜನಿ

SRUJANI: Indian Journal of Innovative Research and Development (SIJIRD)
Volume-3 Issue 4, September-October 2024, Pp.144-147
Bi-Monthly, Peer-Reviewed, Open Access, Indexed Journal

I S S N: 2583-3510
SIRDF
JOURNALS
editor@srujani.in
www.srujani.in

# ಸ್ವಾತಂತ್ರ್ಯ ಹೋರಾಟಕ್ಕೆ ಇಂಗಳಗೊಂದಿಯ ಬುಡಕಟ್ಟು ವರ್ಗದ ಬಂಡಾಯ (1938–1947)

**ಡಾ. ಕೃಷ್ಣಮೂರ್ತಿ ಸಿ. ಎಸ್.**
ಮುಖ್ಯಸ್ಥರು, ಇತಿಹಾಸ ವಿಭಾಗ, ಬಿ.ಎಲ್.ಡಿ.ಈ ಸಂಸ್ಥೆಯ ನೂತನ ಕಲಾ ಮಹಾವಿದ್ಯಾಲಯ, ತಿಕೋಟಾ, ವಿಜಯಪುರ.

**Abstract:**
*ಬುಡಕಟ್ಟು ಸಮುದಾಯಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನೀಡಿದ ಕೊಡುಗೆಯನ್ನು ಗೌರವಿಸಲು ಬುಡಕಟ್ಟು ಹೋರಾಟಗಾರ ದರ್ತಿ ಅಬಾ ಎಂದೇ ಪ್ರಖ್ಯಾತರಾದ ಬಿರ್ಸಾಮುಂಡರವರ ಜನ್ಮದಿನವಾದ ನವೆಂಬರ್ 15 ಅನ್ನು 'ಜನ್‌ಜಾತಿ ಗೌರವ್ ದಿವಸ್' ಎಂದು ಆಚರಿಸಲಾಗುತ್ತಿದೆ. ಬಿರ್ಸಾಮುಂಡರವರು ಸ್ವಾತಂತ್ರ್ಯ ಹೋರಾಟಕ್ಕಾಗಿ ಬುಡಕಟ್ಟು ಪಡೆಯನ್ನು ಕಟ್ಟಿ ಬ್ರಿಟಿಷರ ವಿರುದ್ಧ ಹೋರಾಡಿದರು. ಸ್ವಾತಂತ್ರ್ಯ ಹೋರಾಟದ ಜೊತೆಗೆ ತಮ್ಮ ಭೂಮಿಗಾಗಿ ಭೂ ಹಕ್ಕಿಗಾಗಿ ಹೋರಾಡಿ ಅಲ್ಪ ವಯಸ್ಸಿನಲ್ಲಿಯೇ ವೀರ ಮರಣ ಹೊಂದಿದರು. ಪ್ರಸ್ತುತ ಲೇಖನದಲ್ಲಿ ಶೀರ್ಷಿಕೆ ಸೂಚಿಸುವಂತೆ ಬುಡಕಟ್ಟು ಸಮುದಾಯದ ರೋಚಕ ಹೋರಾಟವನ್ನು ತಿಳಿಸುವ ಮತ್ತು ಅವರ ಸ್ಥಿತಿಗತಿಯನ್ನು ತಿಳಿಸುವ ಅಧ್ಯಯನವಾಗಿದೆ. ಭಾರತದಲ್ಲಿ ಮುಂಡರ ದಂಗೆ, ಕರ್ನಾಟಕದಲ್ಲಿ ಹಲಗಲಿ ಬೇಡರ ದಂಗೆಯಷ್ಟೇ ಪ್ರಸಿದ್ಧಿ ಪಡೆದ ಹೋರಾಟ, ಆದರೆ ಬೆಳಕಿಗೆ ಬರದೆ ಇರುವುದು ಒಂದು ದುರಾದೃಷ್ಟದ ಸಂಗತಿಯಾಗಿದೆ.*

**Keywords:** *ಸ್ವಾತಂತ್ರ್ಯ ಹೋರಾಟ, ಬುಡಕಟ್ಟು ಹೋರಾಟಗಾರರು, ಇಂಗಳಗೊಂದಿ.*

## ಪೀಠಿಕೆ

ಇಂಗಳಗೊಂದಿ ಹರಿಹರ ತಾಲೂಕಿನ ನದಿ ಬಯಲ್ಲಿನಲ್ಲಿರುವ ಒಂದು ಸಣ್ಣ ಗ್ರಾಮವಾಗಿದೆ. ಇದು ಬೇಡರ ಬುಡಕಟ್ಟು ಜನರು ವಾಸಿಸುವ ಗ್ರಾಮವಾಗಿದೆ. ಇವರ ಪ್ರಮುಖ ವೃತ್ತಿ ಬೇಟೆಯಾಡುವುದು ಮತ್ತು ಕೃಷಿ ಮಾಡುವುದಾಗಿದೆ. ಈ ಗ್ರಾಮದಲ್ಲಿ ಕ್ರಿ.ಶ.1900 ರಲ್ಲಿ ಬ್ರಿಟಿಷರು ಹೆಚ್.ಬಿ. ಪಟೇಲ್ ಎಂಬವರನ್ನು ಈ ಗ್ರಾಮದ ಮತ್ತು ಸುತ್ತಮುತ್ತಲಿನ ಗ್ರಾಮದ ಕಂದಾಯ ವಸೂಲಿ ಮಾಡಲು ಪಟೇಲರನ್ನಾಗಿ ನೇಮಿಸಿದರು. 1920ರ ನಂತರದಲ್ಲಿ ಭಾರತದಲ್ಲಿ ಗಾಂಧೀ ಯುಗದಿಂದ ಪ್ರಾರಂಭವಾದ ಚಳವಳಿಗಳು ಈ ಗ್ರಾಮದಲ್ಲಿ ಪ್ರಭಾವ ಬೀರಲು ಪ್ರಾರಂಭಿಸಿದವು. ಆದ್ದರಿಂದ ಸಣ್ಣಪುಟ್ಟ ದಂಗೆಗಳು ಕಂಡುಬರುತ್ತಿದ್ದವು. 1934ರಲ್ಲಿ ಗಾಂಧೀ ಪ್ರಭಾವ ಮತ್ತು ತತ್ವಗಳ ಪಾಲನೆಗೊಂಡವು ನಂತರದಲ್ಲಿ 1938ರಲ್ಲಿ ಕಂದಾಯದ ವಿರುದ್ಧ ಬಂಡಾಯ ಪ್ರಾರಂಭಗೊಂಡು ಸಿದ್ದಪ್ಪ, ಕಾಳೇಗೌಡ, ಗುಂಡೇರ್ ಕರಿಯಪ್ಪ, ತಿರುಕಪ್ಪ ಇನ್ನು ಅನೇಕ ಜನರು 24-04-1939ರಲ್ಲಿ[1] ದಂಗೆ ಎದ್ದರು. ಆದರೆ ಈ ದಂಗೆ ಬೆಳಕಿಗೆ ಬರಲಿಲ್ಲ, ಆದರೆ ಮೈಸೂರು ಸಂಸ್ಥಾನದ ಚಿತ್ರದುರ್ಗ ಜಿಲ್ಲೆಯ ತುರುವೆನೂರು ಎಂಬ ಗ್ರಾಮದಲ್ಲಿ 18 ಸೆಪ್ಟಂಬರ್ 1939 ರಂದು ಬಳ್ಳಾರಿ ಸಿದ್ದಮ್ಮ ಮತ್ತು ನಾಗರತ್ನಮ್ಮ ಹಿರೇಮಠ್,[2] ಎಸ್. ನಿಜಲಿಂಗಪ್ಪ, ವಾಸುದೇವರಾವ್,[3]

**Please cite this article as:** ಕೃಷ್ಣಮೂರ್ತಿ ಸಿ. ಎಸ್. (2024). ಸ್ವಾತಂತ್ರ್ಯ ಹೋರಾಟಕ್ಕೆ ಇಂಗಳಗೊಂದಿಯ ಬುಡಕಟ್ಟು ವರ್ಗದ ಬಂಡಾಯ (1938–1947). *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 3(4), 144–147

ಚಿದಾನಂದಪ್ಪ, ಉಗ್ರಪ್ಪ, ಎನ್. ಎಂ. ಚಂದ್ರಶೇಖರಯ್ಯ ಮತ್ತು ಚಿತ್ರದುರ್ಗದ ಸ್ವಾತಂತ್ರ್ಯ ಹೋರಾಟದ ಸಂಘಟನೆಯ ಯೋಧರು ಭಾಗವಹಿಸಿದರು. ನಂತರ ಈ ಸತ್ಯಾಗ್ರಹ ಚಿತ್ರದುರ್ಗ ಜಿಲ್ಲೆಯ ಅನೇಕ ತಾಲೂಕುಗಳಲ್ಲಿ ಪ್ರಮುಖವಾಗಿ ದಾವಣಗೆರೆ, ಜಗಳೂರು, ಹರಿಹರ ತಾಲೂಕಿನಲ್ಲಿ ಮತ್ತು ತಾಲೂಕಿನ ಗ್ರಾಮಗಳಲ್ಲಿ ಹರಡಲಾಯಿತ್ತು.

1939 ಅರಣ್ಯ ಸತ್ಯಾಗ್ರಹದಿಂದ ಪ್ರಭಾವಗೊಂಡು, ಪೆಬ್ರವರಿ1, 1939ರಲ್ಲಿ ಸುಭಾಷ್ ಚಂದ್ರಬೋಸ್‌ರವರು ಹಾವೇರಿ ಜಿಲ್ಲೆಯ ಬ್ಯಾಡಗಿ,[4] ರಾಣೆಬೆನ್ನೂರಿಗೆ ಆಗಮಿಸಿದಾಗ ಅವರ ಪ್ರೇರಣೆಯಿಂದ 1940ರ ವೇಳೆಗೆ ಎನ್.ಎಂ. ಚಂದ್ರಶೇಖರಯ್ಯನವರ ಮುಖಂಡತ್ವದಲ್ಲಿ 31 ಜನರ ಕಟ್ಟಾಳುಗಳಿಂದ ಸುಭಾಷ್ ಚಂದ್ರಬೋಸ್ ಸಂಘ ಸ್ಥಾಪಿಸಿ, ರಾಷ್ಟ್ರೀಯತೆಯ ಬಗ್ಗೆ ಜಾಗೃತಿ ಮೂಡಿಸಿದರು. ಆದ್ದರಿಂದ ರಾಷ್ಟ್ರಾಭಿಮಾನ, ರಾಷ್ಟ್ರೀಯತೆಯಿಂದ ಈ ಗ್ರಾಮದಲ್ಲಿ ಕಂದಾಯ ಬಹಿಷ್ಕಾರ ಮಾಡಲು ಪ್ರಾರಂಭಿಸಿದರು. ಆಗ "ಬ್ರಿಟಿಷ್ ಸರ್ಕಾರಕ್ಕೆ ಕಂದಾಯ ನೀಡುವುದಿಲ್ಲ, ಆದರೇ ಭಾರತಿಯರೇ ಸರ್ಕಾರವನ್ನು ಸ್ವಾತಂತ್ರ್ಯವಾಗಿ ನಡಸಿದರೆ ಮಾತ್ರ ಕಂದಾಯ ನೀಡುತ್ತೆವೆ"[5] ಎಂದು ಇಂಗಳಗೊಂದಿಯ ಜನರು ಕಂದಾಯ ನೀಡುವುದನ್ನು ಬಹಿಷ್ಕಾರ ಮಾಡಿದರು. ನಂತರ 1941ರ ಜನವರಿ 14 ಮತ್ತು 15 ರಂದು ಇಂಗಳಗೊಂದಿಯಲ್ಲಿ ಸಮಾವೇಶವನ್ನು ನಡೆಸಲಾಗಿದೆ.[6] ಸಮಾವೇಶದ ಅಧ್ಯಕ್ಷತೆಯನ್ನು ಎನ್.ಎಂ.ಚಂದ್ರಶೇಖರಯ್ಯನವರು ವಹಿಸಿಕೊಂಡಿದ್ದರು. ಕೆ.ಹೆಚ್. ಪಟೇಲರು ಈ ಸಮಾವೇಶದ ಜವಾಬ್ದಾರಿ ವಹಿಸಿಕೊಂಡಿದ್ದರು.[7] ಆಗ ಸಭೆ ಸಮಾರಂಭ ಮಾಡಲು ಬ್ರಿಟಿಷರ ಅಥವಾ ಪೋಲೀಸರ ಅನುಮತಿ ಇಲ್ಲದೆ ಯಾವ ಸಮಾವೇಶಗಳನ್ನು ನಡೆಸಲು ಅನುಮತಿ ಇರಲ್ಲಿಲ. ಆ ಸಂದರ್ಭದಲ್ಲಿ ಮೆಣಸಿನಹಾಳು ತಿಮ್ಮನಗೌಡ್ರು, ಕೆ.ಎಫ್.ಪಟೇಲರ ಸಹಾಯದಿಂದ ಸಂಕ್ರಾತಿಯ ಹಬ್ಬದ ನೆಪದ ಮೇಲೆ ಈ ಸಮಾವೇಶ ನಡೆಸಿ ಸಮಾವೇಶದಲ್ಲಿ ಕೇಲವು ನಿರ್ಣಯಗಳನ್ನು ತಗೆದುಕೊಂಡು, ಬ್ರಿಟಿಷರ ವಿರುದ್ಧ ಕೇಲವು ಕಾರ್ಯಚಟವಟಿಕೆಗಳು ಪ್ರಾರಂಭಿಸಿದರು. ಅವುಗಳಲ್ಲಿ ಪ್ರಮುಖವಾಗಿ,

ಬ್ರಿಟಿಷ್‌ರಿಂದ ಸ್ವಾತಂತ್ರ್ಯಗೊಂಡ ಗ್ರಾಮ ಎಂಬ ಘೋಷಣೆ ಮಾಡಿಕೊಂಡರು. ಅದಕ್ಕಾಗಿ ಅವರು ಕಂದಾಯ ನಿರಾಕರಣೆ, ಬೆಳದ ಬೆಳೆಯನ್ನು ರಾತ್ರೋರಾತ್ರಿ ಕಟಾವು ಮಾಡಿ ಪಕ್ಕದ ಬಾಂಬೆ ಪ್ರಸಿಡೆನ್ಸಿಯಲ್ಲಿ ಮಾರಾಟ ಮಾಡುವುದು, ಅಕ್ಕ–ಪಕ್ಕದ ಗ್ರಾಮಗಳ ಧಾನ್ಯಗಳನ್ನು ತರಿಸಿ ಹಗೆವು ತೆಗೆದು ಧಾನ್ಯಗಳನ್ನು ಮುಚ್ಚುವುದು, ರಾತ್ರಿ ಸಮಯದಲ್ಲಿ ಮಣ್ಣಿನ ಗಡಿಗೆಯಲ್ಲಿ ತುಂಬಿ ತುಂಗಭದ್ರ ನದಿಯಲ್ಲಿ ಸಾಗಿಸಿ ಪಕ್ಕದ ಬಾಂಬೆ ಪ್ರೆಸಿಡೆನ್ಸಿಯ ರಾಣಿಬೆನ್ನೂರು ನಗರದಲ್ಲಿ ಮಾರಾಟ ಮಾಡುವುದು, ಸ್ವದೇಶಿ ವಸ್ತುಗಳ ಬಳಕೆಮಾಡುವುದು, ಈಚಲು ಮರಗಳನ್ನು ಕಡಿದು ಹಾಕುವುದು, ಅಪರಿಚಿತ ವ್ಯಕ್ತಿಗಳನ್ನು ಊರಿನ ಒಳಗೆ ಬಿಟ್ಟು ಕೊಳ್ಳಬಾರದು, ಮದ್ಯಪಾನವನ್ನು ನಿಷೆಧೀಸುವುದು, ಬಂಗಿ, ಗಾಂಜಾ ನಿಷೇಧ ಹಾಗೂ ಜಾನುವಾರುಗಳ ಸಾಕಾಣಿಕೆಗೆ ಪ್ರೋತ್ಸಾಹ ನೀಡುವುದು ಸೇರಿದಂತೆ ಅನೇಕ ಕ್ರಮಗಳನ್ನು ಅಂಗೀಕರಿಸಿದರು.

ಈ ಎಲ್ಲಾ ಅಂಶಗಳ ಜೊತೆಯಲ್ಲಿ ಹುಬ್ಬಳ್ಳಿ ತರಿಸಿದ ಸ್ಫೋಟಕ ವಸ್ತುಗಳ ಸಂಗ್ರಹದ ಸ್ಥಳ ಮಾಡಿಕೊಳ್ಳಲಾಗಿತ್ತು. ಕ್ರಾಂತಿಕಾರಿ ಯೋಧರ ಗುಪ್ತ ಸ್ಥಳವಾಗಿತ್ತು. ಈ ಸಮಾವೇಶಕ್ಕೆ ನಿಟ್ಟುವಳ್ಳಿಯ ಬುಡಕಟ್ಟು ಕುಟುಂಬದ ಮಹಿಳೆ "ಹೊನ್ನಿನ ಹೊನ್ನಮ್ಮ" ಎಂಬವರು ಮೆಣಸಿನಹಾಳು ತಿಮ್ಮನಗೌಡರ ಮಾತಿಗೆ ಬೆಲೆಕೊಟ್ಟು ರಾಷ್ಟ್ರಭಕ್ತಿಯಿಂದ ಸಮಾವೇಶಕ್ಕೆ ಬೇಕಾದ ಊಟದ ವ್ಯವಸ್ಥೆಯ ಖರ್ಚನ್ನು ನೋಡಿಕೊಂಡಿದರು.[8] ಎಂಬುದನ್ನು ಎನ್.ಎಂ. ಚಂದ್ರಶೇಖರಯ್ಯನವರು ಸ್ಮರಿಸುತ್ತಾರೆ. ಈ ಸಮಾವೇಶ ಸುದ್ದಿ ತಿಳಿದ ಮೇಲೆ ಈ ಗ್ರಾಮಕ್ಕೆ ಒಂದು ಪೋಲಿಸ್ ಪಡೆಯನ್ನು ಕಾರ್ಯನಿರ್ವಹಿಸಲು ಸೂಚಿಸಿದರು.

(ದಿನಾಂಕ:26/11/1941ರಲ್ಲಿ ಪೋಲಿಸ್ ತನಿಖಾ ವರದಿಯನ್ನು ಕಾಣಬಹುದು) ಆದ್ದರಿಂದ ಈ ಗ್ರಾಮದ ಎಲ್ಲಾ ಕಾರ್ಯಚಟುವಟಿಕಗಳು ರಾತ್ರೋರಾತ್ರಿ ನಡೆಯಲಾರಂಭಿಸಿದವು.[9] "1942ರ ಭಾರತ ಬಿಟ್ಟು ತೊಲಗಿ" ಚಳವಳಿ ತೀವ್ರಗೊಂಡಾಗ ದಾವಣಗೆರೆ ಮತ್ತು ಪಕ್ಕದ ಬಾಂಬೆ ಪ್ರಸಿಡೆನ್ಸಿಯ ಕ್ರಾಂತಿಕಾರಿಗಳಿಗೆ ಆಶ್ರಯ ತಾಣವಾಗಿ ದಿನೆದಿನೆ ಬ್ರಿಟಿಷರ ವಿರುದ್ಧ ಅಸಮಾಧಾನ ಹೆಚ್ಚಾಗಿತ್ತು. ಈ ಸಮಯದಲ್ಲಿ (ದಿನಾಂಕ:16/11/1942ರಲ್ಲಿ ಯು.ಆರ್. ಅಂಬರೀಷ್ ರಾಮ್) ತನಿಖಾ ವರದಿಯನ್ನು ಮಾಡಲು ಬಂದಿದ್ದ ಅಧಿಕಾರಿಗಳನ್ನು ಊರಿನ ಒಳಗೆ ಬರಮಾಡಿಕೊಳ್ಳದೆ ಅವರ ಮೇಲೆ ಹಲ್ಲೆ ಮಾಡಿ ಕಳುಹಿಸಿದ್ದಾರೆ. ಆದ್ದರಿಂದ ತೀವ್ರಗೊಂಡ ಹೋರಾಟವನ್ನು ದಮನಗೊಳಿಸಲು ಈ ಗ್ರಾಮದ ತುಂಬ ದಸ್ತಗಿರಿ ನಡೆಸಿದರು. ಆ ಸಂದರ್ಭದಲ್ಲಿ ಅನೇಕರ ಮೇಲೆ ಲಾಟಿ ಪ್ರಹಾರ ಮಾಡಿದರು. ಇದರಿಂದ ಈ ಬುಡಕಟ್ಟು ಜನಾಂಗದ ಜನರು ಸ್ವಾತಂತ್ರ್ಯವಾಗಿ ಜೀವಿಸುವ ಬದುಕಿ ಬಾಳುವ ಗುರಿಯನ್ನು ಹೊಂದಿದ್ದರು. ಆದ್ದರಿಂದ ಗಂಗಮ್ಮ ಎಂಬ ಮುದುಕಿ ಆ ಗ್ರಾಮದ ಯುವಕರಿಗೆ ಉರುಪು ನೀಡಿದಳು "ಕಿಚ್ಚು ಕೆಡಿಸಿತ್ತು, ಕೆಚ್ಚು ಬದುಕಿಸಿತ್ತು" "ಪರಂಗಿಯವರ ಆಳ್ವಿಕೆ ನಮಗೆ ಬೇಡ" ಹೇಳಿದಳು. ಆದರೆ ಸಂಪೂರ್ಣವಾಗಿ ಕಂದಾಯದ ವಿರುದ್ಧ ದಂಗೆಯೆದ್ದ ಜನರು ಬ್ರಿಟಿಷ್‌ರ ವಿರುದ್ಧವಾಗಿ ಧಿಕ್ಕರಿಸಿ ತಾವು ಬೆಳದ ಬೆಳೆಯನ್ನು ಪಕ್ಕದ ಬಾಂಬೆ ಪ್ರಸಿಡೆನ್ಸಿಯ ರಾಣೆಬೆನ್ನೂರು ನಗರದಲ್ಲಿ ಮಾರಾಟ ಮಾಡುತ್ತಿದರು. ಆದ್ದರಿಂದ (ದಿನಾಂಕ:22/12/1943) ಈ ಗ್ರಾಮಕ್ಕೆ ಭೇಟಿ ನೀಡಿದ ವಿಶೇಷ ಪೋಲಿಸ್ ಇನ್‌ಸ್ಪೆಕ್ಟರ್ ಎಂ.ವೆಂಕಟಸ್ವಾಮಿ ತನ್ನ ತನಿಖಾ ವರದಿಯಲ್ಲಿ ಯಾರು ತಂಬಾಕು ಮತ್ತು ಇತರೆ ಬೇಳೆಗಳ ಕಂದಾಯವನ್ನು ಕಟ್ಟುವುದಿಲ್ಲವೋ ಅಂತಹ ವ್ಯಕ್ತಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂಬ ಅಂಶವನ್ನು ಲಿಖಿತ ರೋಪದಲ್ಲಿ ಬರದಿದ್ದಾನೆ.[10] ಇದನ್ನು ಗಮನಿಸಿದ ಜನರು ಮರುದಿನ ರಾತ್ರೋರಾತ್ರಿ ಸಂಪೂರ್ಣವಾಗಿ ಆ ಗ್ರಾಮದ ಎಲ್ಲಾ ತಂಬಾಕು ಬೇಳೆದ ಜಮೀನಿಗೆ ಬೆಂಕಿಹಚ್ಚಿ ಬ್ರಿಟಿಷರ ವಿರುದ್ಧ ಧಿಕ್ಕಾರ ಹಾಕಿರುವುದು ಒಂದು ರೊಚಕ ಕಥೆಯಾಗಿದೆ. ನಂತರ ಬ್ರಿಟಿಷರ ವಿರುದ್ಧ ಸಣ್ಣ-ಸಣ್ಣ ದಂಗೆಗಳನ್ನು ಮಾಡಿ ತದನಂತರ ನಡೆದ ಮೈಸೂರು ಚಲೋ ಚಳವಳಿ ಭಾಗವಹಿಸಿ, ಮೈಸೂರು ಸಂಸ್ಥನ ಸ್ವಾತಂತ್ರ್ಯಗೊಂಡ ನಂತರ ಹರ್ಷವ್ಯಕ್ತಪಡಿಸಿದ್ದಾರೆ.

**ಸಮಾರೋಪ**

ಈ ವಿಷಯದ ಬಗ್ಗೆ ಅಧ್ಯಯನ ಮಾಡಿದಾಗ ಇಂತಹ ಕೆಳವರ್ಗದ ಚರಿತ್ರೆಯನ್ನು ನಿರ್ಲಕ್ಷಿಸುವುದು ಮತ್ತು ಇಂತಹ ಚರಿತ್ರೆಗಳು ಬೆಳಕಿಗೆ ಬರದೆ ಇರುವುದು ಬಹಳ ದುರಾದೃಷ್ಟದ ಸಂಗತಿಯಾಗಿದೆ. ಬಹುಶಃ ನನಗೆ ತಿಳಿದ ಮಟ್ಟಿಗೆ ಮತ್ತು ಕೇಲವು ಹಿರಿಯ ವಿದ್ವಾಂಸರ ಜೊತೆಯಲ್ಲಿ ವಿಮರ್ಶೆ ಮಾಡಿದಾಗ "ಕರ್ನಾಟಕದಲ್ಲಿ ಬ್ರಿಟಿಷರ ಕಂದಾಯದ ವಿರುದ್ಧ ಬಂಡಾಯ ಎದ್ದ ಮತ್ತು ಪ್ರಪ್ರಥಮವಾಗಿ ಸ್ವಾತಂತ್ರ್ಯ ಘೋಷಿಸಿಕೊಂಡ ಬುಡಕಟ್ಟು ಗ್ರಾಮ" ಎಂದು ಹೇಳಬಹುದಾಗಿದೆ. ಅದೇ ರೀತಿ ಇನ್ನು ಹೆಚ್ಚಿನ ರೀತಿಯಲ್ಲಿ ಸಂಶೋಧನಾತ್ಮಕ ಅಧ್ಯಯನಗಳು ನಡೆಯುತ್ತಾ ಹೋದಾಗ ಹೆಚ್ಚು-ಹೆಚ್ಚು ಕೆಳವರ್ಗದ ಸಂಶೋಧನಾತ್ಮಕ ಅಧ್ಯಯನಗಳು ಬೆಳಕಿಗೆ ಬರುವುದರಲ್ಲಿ ಸಂಶಯವೇ ಇಲ್ಲ.

**ಕೊನೆಟಿಪ್ಪಣಿಗಳು**


1. Mysore Government, Remarks on inspection Record, Date: 24/04/1939.
2. ಯಶೋಧ ರಾಜಶೇಖರಪ್ಪ, ಪಿ. *ಸ್ವಾತಂತ್ರ್ಯ ಇತಿಹಾಸದ ಪುಟಗಳಲ್ಲಿ ಚಿತ್ರದುರ್ಗ ಜಿಲ್ಲೆ.* ದವನಸಿರಿ, ಪುಟ. 53.
3. ಸೂರ್ಯನಾಥ ಕಾಮತ್, ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂ-2, ಪುಟ. 514, 515.
4. ರೇಣುಕಾ ಎಸ್. ಸಂಕನಗೌಡ್ರು. *ಕೆ.ಎಫ್. ಪಾಟೀಲ್ ಬದುಕು- ಬರಹ.* ಪುಟ. 105

5. ವಕ್ತೃ: ಚಂದ್ರಶೇಖರಯ್ಯ, ಎನ್.ಎಂ. ಸಂದರ್ಶನ, ದಿನಾಂಕ: 01/12/2012.
6. ವಕ್ತೃ: ಗೋವಿಂದಪ್ಪ, ಜಿ. ಸಂದರ್ಶನ, ದಿನಾಂಕ: 09/06/2014.
7. ವಕ್ತೃ: ಮಹೇಶ್ವರಪ್ಪ ಕೆ.ಜಿ. ಸಂದರ್ಶನ, ದಿನಾಂಕ: 21/09/2014.
8. ವಕ್ತೃ: ಚಂದ್ರಶೇಖರಯ್ಯ, ಎನ್.ಎಂ. ಸಂದರ್ಶನ, ದಿನಾಂಕ: 01/12/2012.
9. Mysore Government, Remarks on inspection Record, Date: 26/11/1941
10. Mysore Government, Remarks on inspection Record, Date: 22/12/1943.